ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: https://kptcl.karnataka.gov.in/
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)

ಓದಲಾಗಿದೆ:

1. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 106 ಸೇನೆನಿ 2021 ದಿನಾಂಕ: 10.12.2021.
2. ನಿಗಮ ಕಾರ್ಯಾಲಯದ ದಿನಾಂಕ: 19.01.2022 ರ ಟಿಪ್ಪಣಿ.

**ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/5411/1996-97, ಬೆಂಗಳೂರು, ದಿನಾಂಕ: 21 JAN 2022**

ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳನ್ನು ಭರ್ತಿ ಮಾಡುವಾಗ ರಿಕ್ತ ಸ್ಥಾನ ಆಧಾರಿತ ವರ್ಗೀಕರಣದ ಬದಲಾಗಿ ಹುದ್ದೆ ಆಧಾರಿತ ವರ್ಗೀಕರಣವನ್ನು ಅನುಸರಿಸಿ ಭರ್ತಿ ಮಾಡುವ ಬಗ್ಗೆ ಮಾರ್ಗಸೂಚನೆಗಳನ್ನು ತಿಳಿಸುತ್ತಾ, ಸರ್ಕಾರವು ಹೊರಡಿಸಿರುವ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 106 ಸೇನೆನಿ 2021 ದಿನಾಂಕ: 10.12.2021 ನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಗಮದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಸರ್ಕಾರದ ದಿನಾಂಕ: 10.12.2021 ರ ಅಧಿಕೃತ ಜ್ಞಾಪನವನ್ನು ಈ ಆದೇಶಕ್ಕೆ **'ಅನುಬಂಧ'** ಎಂದು ಲಗತ್ತಿಸಲಾಗಿದೆ.

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)

ಮೆಮೋ

ಕ್ರಮಾಂಕ:ಚಾವಿಸನಿನಿ/ಆ ಮತ್ತು ಮಾ.ಸಂ./05/04/2022-23/ cys-499 ದಿನಾಂಕ: 04 JUL 2022

ನಿರ್ದೇಶಕರು(ಆ ಮತ್ತು ಮಾಸಂ), ಕವಿಪ್ರನಿನಿ, ಬೆಂಗಳೂರುರವರ ಆದೇಶ ಪತ್ರ ಸಂಖ್ಯೆ:ಕವಿಪ್ರನಿನಿ/ಬಿ16/5411/ 1996-97 ದಿನಾಂಕ:21.01.2022ರ ಆದೇಶವನ್ನು ಚಾವಿಸನಿನಿಯಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ಆದೇಶಿಸಲಾಗಿದೆ.

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಚಾ.ವಿ.ಸ.ನಿ.ನಿ., ಮೈಸೂರು.

ಪ್ರತಿಗಳು:

- ಮುಖ್ಯ ಆರ್ಥಿಕ ಅಧಿಕಾರಿ, ಚಾವಿಸನಿನಿ., ಮೈಸೂರುರವರ ಅವಗಾಹನೆಗಾಗಿ.
- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ನಿಗಮ ಕಛೇರಿ, ಮೈಸೂರು.
- ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ., ಹಾಸನ/ಮೈಸೂರು.

AGM-2

ಪು.ತಿ.ನೋ.

- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿರವರ ಮಾಹಿತಿಗಾಗಿ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ.,ರವರ ಮಾಹಿತಿಗಾಗಿ.
- ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್), ನಿಗಮ ಕಛೇರಿ, ಮೈಸೂರುರವರಿಗೆ ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
- ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)/ಮುಖ್ಯ ಆರ್ಥಿಕ ಸಲಹೆಗಾರರು ಇವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಪ್ರತಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)/ ಮುಖ್ಯ ಆರ್ಥಿಕ ಸಲಹೆಗಾರರುರವರ ಗಮನಕ್ಕೆ ತರುವಂತೆ ಕೋರಿದೆ.
- ಸ-2(ಆ ಮತ್ತು ಮಾ.ಸಂ)/ಪ್ರ.ಕ.

ನೇಮಕಾತಿ ನಿಯಮಗಳು ಮಧ್ಯದ ಅವಧಿಯಲ್ಲಿ ತಿದ್ದುಪಡಿಯಾದಲ್ಲಿ, ತಿದ್ದುಪಡಿಯಾದ ದಿನಾಂಕದವರೆಗೆ ಬ್ಲಾಕ್ ಅವಧಿಯನ್ನು ಗುರುತಿಸಬೇಕಾಗುತ್ತದೆ. ಒಂದು ಬ್ಲಾಕ್ ಅವಧಿಯಲ್ಲಿ ಯಾವುದೇ ಮೂಲದಿಂದ ಉದ್ಭವವಾದ ಒಟ್ಟು ರಿಕ್ತ ಸ್ಥಾನಗಳನ್ನು ನಿಗದಿತ ಅನುಪಾತದನ್ವಯ ನೇರ ನೇಮಕಾತಿ ರಿಕ್ತ ಸ್ಥಾನಗಳು ಮತ್ತು ಮುಂಬಡ್ತಿ ರಿಕ್ತ ಸ್ಥಾನಗಳು ಎಂದು ವರ್ಗೀಕರಿಸಿ, ನೇರ ನೇಮಕಾತಿ ರಿಕ್ತ ಸ್ಥಾನಗಳನ್ನು ನೇರ ನೇಮಕಾತಿಯಿಂದ ಮತ್ತು ಮುಂಬಡ್ತಿ ರಿಕ್ತಸ್ಥಾನಗಳನ್ನು ಮುಂಬಡ್ತಿಯಿಂದ ಭರ್ತಿ ಮಾಡಬೇಕಾಗುತ್ತದೆ.

3. ಪ್ರಸ್ತುತ ಜಾರಿಯಲ್ಲಿರುವ ಮೇಲ್ಕಂಡ ರಿಕ್ತ ಸ್ಥಾನ ಆಧಾರಿತ ಪದ್ಧತಿಯನ್ನು ಅನುಸರಿಸಿದಲ್ಲಿ, ಯಾವುದೇ ಒಂದು ಬ್ಲಾಕ್ ಅವಧಿಯಲ್ಲಿ ನೇರ ನೇಮಕಾತಿ ಅಥವಾ ಮುಂಬಡ್ತಿಗಾಗಿ ವರ್ಗೀಕರಣ ಮಾಡಲಾದ ರಿಕ್ತ ಸ್ಥಾನಗಳನ್ನು ಆ ಅವಧಿಯಲ್ಲಿ ಭರ್ತಿ ಮಾಡಲು ಸಾಧ್ಯವಾಗದಿದ್ದಲ್ಲಿ, ಅಂತಹ ರಿಕ್ತಸ್ಥಾನಗಳನ್ನು ಮುಂದಿನ ಬ್ಲಾಕ್ ಅವಧಿಗೆ ಕೊಂಡೊಯ್ಯಬೇಕಾಗುತ್ತದೆ ಹಾಗೂ ಹೆಚ್ಚುವರಿಯಾಗಿ ಮುಂಬಡ್ತಿ ನೀಡಿದ್ದಲ್ಲಿ, ಅಂತಹ ಮುಂಬಡ್ತಿಗಳನ್ನು ಮುಂದಿನ ಬ್ಲಾಕ್ ಅವಧಿಗಳಲ್ಲಿ ಸರಿದೂಗಿಸಬೇಕಾಗುತ್ತದೆ. ನೇರ ನೇಮಕಾತಿ ಪ್ರಕ್ರಿಯೆಗಳು ಕಾಲಕಾಲಕ್ಕೆ ನಡೆಯದ ಪ್ರಯುಕ್ತ ನಿಗದಿತ ಅನುಪಾತದನ್ವಯ ನೇರ ನೇಮಕಾತಿಗೆ ರಿಕ್ತ ಸ್ಥಾನಗಳನ್ನು ವರ್ಗೀಕರಿಸಿ ಕ್ರೋಢೀಕರಣ ಮಾಡಿದಾಗ ಕೆಲವು ಸಂದರ್ಭಗಳಲ್ಲಿ ಅವುಗಳ ಸಂಖ್ಯೆಯು ವೃಂದ ಬಲಕ್ಕಿಂತ (Cadre Strength) ಹೆಚ್ಚಾಗುವ ಸಂಭವವಿರುತ್ತದೆ. ಈ ರೀತಿ ರಿಕ್ತ ಸ್ಥಾನ ಆಧಾರಿತ ಪದ್ಧತಿಯನ್ನು ಅನುಸರಿಸಿದಲ್ಲಿ, ನೇರ ನೇಮಕಾತಿಗಾಗಿ ಹಾಗೂ ಮುಂಬಡ್ತಿಗಾಗಿ ನಿಗದಿತ ಅನುಪಾತದನ್ವಯ ವರ್ಗೀಕರಣ ಮಾಡಿದಾಗ ಅಸಮತೋಲನ ಉಂಟಾಗುವುದನ್ನು ಮತ್ತು ಈ ಅಸಮತೋಲನದ ಹಿನ್ನೆಲೆಯಲ್ಲಿ ನ್ಯಾಯಾಲಯಗಳಲ್ಲಿ ಪ್ರಕರಣಗಳು ದಾಖಲಾಗಿರುವುದನ್ನು ಸರ್ಕಾರವು ಗಮನಿಸಿರುತ್ತದೆ.

4. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ಆರ್.ಕೆ. ಸಬರ್‌ವಾಲ್ ವಿರುದ್ಧ ಪಂಜಾಬ್ ರಾಜ್ಯ (AIR 1995 SC 1371) ಪ್ರಕರಣದಲ್ಲಿ ಮೀಸಲಾತಿಯನ್ನು ರಿಕ್ತಸ್ಥಾನ ಆಧಾರಿತವಾಗಿ ಜಾರಿಗೊಳಿಸುವ ಬದಲಾಗಿ ಹುದ್ದೆಯಾಧಾ ತವಾಗಿ ಜಾರಿಗೊಳಿಸತಕ್ಕದ್ದೆಂಬ ತತ್ವವನ್ನು ಪ್ರತಿಪಾದಿಸಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪ್ರತಿಪಾದಿಸಿರುವ ಸದರಿ ತತ್ವವನ್ನು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನೇಮಕಾತಿ ಮತ್ತು ಮುಂಬಡ್ತಿಗಾಗಿ ನಿಗದಿಪಡಿಸಿದ ಅನುಪಾತದನ್ವಯ ನೇರ ನೇಮಕಾತಿಗೆ ಮತ್ತು ಮುಂಬಡ್ತಿಗೆ ರಿಕ್ತಸ್ಥಾನ ಆಧಾರಿತ ವರ್ಗೀಕರಣ ಮಾಡುವ ಬದಲಾಗಿ, ಹುದ್ದೆ ಆಧಾರತ ವರ್ಗೀಕರಣ ಮಾಡಲು ಅನುಸರಿಸುವುದು ಯುಕ್ತವೆಂದು ಸರ್ಕಾರ ಮನಗಂಡಿರುತ್ತದೆ. ಈ ತತ್ವವನ್ನು ಅನುಸರಿಸಿ, ದಿನಾಂಕ 23-03-2016 ರ ಅಧಿಕೃತ ಜ್ಞಾಪನ ಸಂಖ್ಯೆ ಡಿಪಿಎಆರ್ 557 ಎಸ್‌ಆರ್‌ಆರ್ 2015ರಲ್ಲಿ ಕೆ.ಎ.ಎಸ್. (ಕಿರಿಯ ಶ್ರೇಣಿ) ವೃಂದದ ಹುದ್ದೆಗಳನ್ನು ನಿಗದಿತ ಅನುಪಾತದನ್ವಯ ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಹುದ್ದೆ ಆಧಾರಿತ ವರ್ಗೀಕರಣ ಮಾಡಲು ಈಗಾಗಲೇ ಮಾರ್ಗಸೂಚನೆಗಳನ್ನು ಗೊತ್ತುಪಡಿಸಲಾಗಿದ್ದು, ಅವುಗಳು ಜಾರಿಯಲ್ಲಿರುತ್ತವೆ.

ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/5411/96-97, ದಿನಾಂಕ: 21 JAN 2022 ರ ಅನುಬಂಧ

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಆಸುಇ 106 ಸೆನೆನಿ 2021

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 10-12-2021.

**ಅಧಿಕೃತ ಜ್ಞಾಪನ**

**ವಿಷಯ:** ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳನ್ನು ಭರ್ತಿ ಮಾಡುವಾಗ ರಿಕ್ತ ಸ್ಥಾನ ಆಧಾರಿತ ವರ್ಗೀಕರಣದ ಬದಲಾಗಿ ಹುದ್ದೆ ಆಧಾರಿತ ವರ್ಗೀಕರಣವನ್ನು ಅನುಸರಿಸುವ ಬಗ್ಗೆ.

**ಉಲ್ಲೇಖ:** (1) ದಿನಾಂಕ 05-07-1976ರ ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 48 ಎಸ್ಎಸ್ಆರ್ 75.
(2) ದಿನಾಂಕ 14-12-1987ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 43 ಸೆನೆನಿ 87.
(3) ದಿನಾಂಕ 16-07-1996ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 07 ಸೆನೆನಿ 96
(4) ದಿನಾಂಕ 10-06-2003ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 32 ಸೆನೆನಿ 2003.
(5) ದಿನಾಂಕ 04-06-2019ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 03 ಎಸ್ಆರ್ಎಸ್ 2019.

*****

1. ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಯಾವುದೇ ಒಂದು ವೃಂದಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿ ಮುಖಾಂತರ ಮತ್ತು ಮುಂಬಡ್ತಿ ಮುಖಾಂತರ ಭರ್ತಿ ಮಾಡಲು ಅನುಪಾತ (Quota) ನಿಗದಿಪಡಿಸಿದ್ದಲ್ಲಿ, ಆ ಅನುಪಾತದ ಪ್ರಕಾರ ಹುದ್ದೆಗಳನ್ನು ಭರ್ತಿ ಮಾಡಿದ ಪ್ರಕರಣಗಳಲ್ಲಿ, ನೇರ ನೇಮಕಾತಿ ಹೊಂದಿದ ಮತ್ತು ಮುಂಬಡ್ತಿ ಹೊಂದಿದ ನೌಕರರುಗಳ ಅಂತರ ಜೇಷ್ಠತೆಯನ್ನು ನಿಗದಿಪಡಿಸುವ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ವಿ.ಬಿ. ಬಾದಾಮಿ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ ಪ್ರಕರಣದಲ್ಲಿ ನೀಡಿರುವ ತೀರ್ಪನ್ನು ಅನುಸರಿಸಿ ರಾಜ್ಯ ಸರ್ಕಾರವು ಉಲ್ಲೇಖ (1) ರ ದಿನಾಂಕ 05-07-1976 ರ ಅಧಿಕೃತ ಜ್ಞಾಪನದಲ್ಲಿ ಮಾರ್ಗಸೂಚನೆಗಳನ್ನು ನೀಡಿರುತ್ತದೆ. ತದನಂತರ, ಈ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಗೋನಾಳ್ ಭೀಮಪ್ಪ ವಿರುದ್ಧ ಕರ್ನಾಟಕ ರಾಜ್ಯ ಪ್ರಕರಣದಲ್ಲಿ ದಿನಾಂಕ 11-08-1987 ರಂದು ನೀಡಿರುವ ತೀರ್ಪಿನಲ್ಲಿ ವಿ.ಬಿ. ಬಾದಾಮಿ ಪ್ರಕರಣದಲ್ಲಿ ನೀಡಿದ್ದ ತೀರ್ಪನ್ನು ಎತ್ತಿ ಹಿಡಿದಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸದರಿ ತೀರ್ಪುಗಳ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಉಲ್ಲೇಖ (2) ರ ದಿನಾಂಕ 14-12-1987 ರ ಅಧಿಕೃತ ಜ್ಞಾಪನದಲ್ಲಿ ಮುಂದುವರಿದ ಮಾರ್ಗಸೂಚನೆಗಳನ್ನು ನೀಡಿರುತ್ತದೆ.

2. ಉಲ್ಲೇಖ (1) ರ ದಿನಾಂಕ 05-07-1976 ರ ಅಧಿಕೃತ ಜ್ಞಾಪನದನ್ವಯ, ನೇರ ನೇಮಕಾತಿ ಮತ್ತು ಮುಂಬಡ್ತಿ ಪಾಲಿನ ರಿಕ್ತ ಸ್ಥಾನಗಳನ್ನು ವರ್ಗೀಕರಣ ಮಾಡಿ ಲೆಕ್ಕ ಹಾಕಲು 'ಬ್ಲಾಕ್ ಅವಧಿ' ಯನ್ನು ಗುರುತಿಸಬೇಕಾಗಿರುತ್ತದೆ. ಅದರನ್ವಯ ವೃಂದ ಮತ್ತು ನೇಮಕಾತಿ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ, ನೇರ ನೇಮಕಾತಿ ಮುಖಾಂತರ ನೇಮಕಾತಿಯಾಗುವವರೆಗೆ ಅಥವಾ ವೃಂದ ಮತ್ತು

(4) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ನೇರ ನೇಮಕಾತಿ ಬ್ಯಾಕ್‌ಲಾಗ್ ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳಿಗೆ ಸೇರಿದ ಮುಂಬಡ್ತಿ ಬ್ಯಾಕ್‌ಲಾಗ್ ಬಾಕಿ ಇದ್ದಲ್ಲಿ, ಅವುಗಳು ರದ್ದುಗೊಳ್ಳುವುದಿಲ್ಲ. ಆದರೆ, ನೇರ ನೇಮಕಾತಿ ಮತ್ತು ಮುಂಬಡ್ತಿಯಲ್ಲಿ ಗುರುತಿಸಲಾದ ಸದರಿ ಬ್ಯಾಕ್‌ಲಾಗ್‌ನ್ನು ನೇರ ನೇಮಕಾತಿ ಮತ್ತು ಮುಂಬಡ್ತಿಗೆ ನಿಗದಿಪಡಿಸಲಾದ ಅನುಪಾತ/ ಪ್ರತಿಶತದ ಪರಿಮಿತಿಯಲ್ಲಿಯೇ ಭರ್ತಿ ಮಾಡತಕ್ಕದ್ದು.

(5) ನೇರ ನೇಮಕಾತಿ ಮುಖಾಂತರ ನೇಮಕಾತಿ ಹೊಂದಿದ ನೌಕರನು ಮುಂಬಡ್ತಿ, ನಿವೃತ್ತಿ, ರಾಜೀನಾಮೆ ಇತ್ಯಾದಿ ಕಾರಣಗಳಿಂದ ಹುದ್ದೆಯನ್ನು ತೆರವುಗೊಳಿಸಿದಲ್ಲಿ, ತೆರವಾಗುವ ಆ ಹುದ್ದೆಯನ್ನು ನೇರ ನೇಮಕಾತಿಯಿಂದಲೇ ಭರ್ತಿ ಮಾಡತಕ್ಕದ್ದು. ಅದೇ ರೀತಿಯಲ್ಲಿ, ಮುಂಬಡ್ತಿ ಮುಖಾಂತರ ನೇಮಕಾತಿ ಹೊಂದಿದ ನೌಕರನಿಂದ ತೆರವಾಗುವ ಆ ಹುದ್ದೆಯನ್ನು ಮುಂಬಡ್ತಿಯಿಂದಲೇ ಭರ್ತಿ ಮಾಡತಕ್ಕದ್ದು.

(6) ಆಡಳಿತಾತ್ಮಕ ತುರ್ತು ಸಂದರ್ಭಗಳಲ್ಲಿ ಮತ್ತು ವಿರಳವಾದ ಹಾಗೂ ಅಪವಾದಾತ್ಮಕ ಪ್ರಕರಣಗಳಲ್ಲಿ ಮಾತ್ರ, ಕಾರಣಗಳನ್ನು ಸ್ಪಷ್ಟವಾಗಿ ಲಿಖಿತ ಮೂಲಕ ದಾಖಲಿಸಿ ನೇರ ನೇಮಕಾತಿ ಹುದ್ದೆಗಳ ಎದುರಾಗಿ ತಾತ್ಕಾಲಿಕವಾಗಿ ಸ್ವತಂತ್ರ ಪ್ರಭಾರ ವ್ಯವಸ್ಥೆಯನ್ನು ಮಾಡಬಹುದು. ಸ್ವತಂತ್ರ ಪ್ರಭಾರ ವ್ಯವಸ್ಥೆಯ ಮುಖಾಂತರ ಭರ್ತಿ ಮಾಡಲಾದ ಸದರಿ ಹುದ್ದೆಗಳಿಗೆ ನೇರ ನೇಮಕಾತಿಯ ಮುಖಾಂತರ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿದ ಕೂಡಲೇ, ಸದರಿ ಸ್ವತಂತ್ರ ಪ್ರಭಾರ ವ್ಯವಸ್ಥೆಯು ತಂತಾನೆ ರದ್ದಾಗುತ್ತದೆ. ಸರ್ಕಾರಿ ನೌಕರನು ಉನ್ನತ ಹುದ್ದೆಯಲ್ಲಿ ಸ್ವತಂತ್ರ ಪ್ರಭಾರದ ಆಧಾರದ ಮೇಲೆ ಸಲ್ಲಿಸಲಾದ ಸೇವೆಯನ್ನು ಸ್ವತಂತ್ರ ಪ್ರಭಾರದಲ್ಲಿರಿಸಲಾದ ಆ ವೃಂದದಲ್ಲಿನ ಜೇಷ್ಠತೆಗೆ ಪರಿಗಣಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಅಲ್ಲದೇ, ನೇರ ನೇಮಕಾತಿಗಾಗಿ ನಿರ್ಧರಿಸಲಾದ ಹುದ್ದೆಗೆ ಎದುರಾಗಿ ಸ್ವತಂತ್ರ ಪ್ರಭಾರದ ಆಧಾರದ ಮೇಲೆ ಕರ್ತವ್ಯವನ್ನು ನಿರ್ವಹಿಸುತ್ತಿರುವ ನೌಕರನು ನೇರ ನೇಮಕಾತಿಗೆ ನಿರ್ಧರಿಸಲಾದ ಆ ಹುದ್ದೆಯ ಎದುರಾಗಿ ಮುಂಬಡ್ತಿ ಅಥವಾ ಪೂರ್ವಾನ್ವಯ ಮುಂಬಡ್ತಿ ನೀಡಬೇಕೆಂದು ಹಕ್ಕೊತ್ತಾಯ ಮಾಡಲು ಬರುವುದಿಲ್ಲ.

(7) ಈ ಅಧಿಕೃತ ಜ್ಞಾಪನವು ಜಾರಿಗೆ ಬರುವ ಪೂರ್ವದಲ್ಲಿ ನಿರ್ಧರಿಸಲಾದ ಜೇಷ್ಠತೆ ಮತ್ತು ಅಂತಿಮಗೊಳಿಸಲಾದ ಜೇಷ್ಠತಾ ಪಟ್ಟಿಗಳ ಮೇಲೆ ಈ ಅಧಿಕೃತ ಜ್ಞಾಪನದಲ್ಲಿನ ಮಾರ್ಗಸೂಚನೆಗಳು ಯಾವುದೇ ಪರಿಣಾಮವನ್ನು ಬೀರುವುದಿಲ್ಲ.

(8) ಈ ಅಧಿಕೃತ ಜ್ಞಾಪನವು ಜಾರಿಗೆ ಬರುವ ಪೂರ್ವದಲ್ಲಿ ಜಾರಿಯಲ್ಲಿದ್ದ ರಿಕ್ತಸ್ಥಾನ ಆಧಾರಿತ ಪದ್ಧತಿಯ ಅನುಸಾರ ನೇರ ನೇಮಕಾತಿ ಹೊಂದಿರುವ ನೌಕರರು, ಒಂದು ವೇಳೆ ಈ ಅಧಿಕೃತ ಜ್ಞಾಪನದಲ್ಲಿ ಗೊತ್ತುಪಡಿಸಲಾದ ಹುದ್ದೆ ಆಧಾರಿತ ಪದ್ಧತಿಯ ಅನುಸಾರ ನೇರ ನೇಮಕಾತಿಗೆ ನಿರ್ದಿಷ್ಟಪಡಿಸಲಾದ ಹುದ್ದೆಗಳ ಅನುಪಾತ/ ಪ್ರತಿಶತಕ್ಕಿಂತಲು ಹೆಚ್ಚಿನ ಸಂಖ್ಯೆಯಲ್ಲಿದ್ದಲ್ಲಿ ಮತ್ತು ಅವರುಗಳು

5. ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ, ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳನ್ನು ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿದ ಅನುಪಾತದನ್ವಯ ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ರಿಕ್ತ ಸ್ಥಾನ ಆಧಾರಿತ ವರ್ಗೀಕರಣ ಮಾಡುವ ಪದ್ಧತಿಯನ್ನು ಈ ಮೂಲಕ ರದ್ದುಪಡಿಸಲಾಗಿದೆ. ಹುದ್ದೆ ಆಧಾರಿತ ವರ್ಗೀಕರಣವನ್ನು ಅನುಸರಿಸಿ ಭರ್ತಿ ಮಾಡಲು ಉಲ್ಲೇಖಿತ ದಿನಾಂಕ 05-07-1976, 14-12-1987, 16-07-1996, 10-06-2003 ಮತ್ತು 04-06-2019ರ ಅಧಿಕೃತ ಜ್ಞಾಪನಗಳನ್ನು ಅಕ್ಷರಮಟ್ಟಿಗೆ ಮಾರ್ಪಡಿಸಿ, ಈ ಕೆಳಕಂಡ ಮಾರ್ಗಸೂಚನೆಗಳನ್ನು ನೀಡಲಾಗಿದೆ:

(1) ರಾಜ್ಯ ಸಿವಿಲ್ ಸೇವೆಗಳಲ್ಲಿನ ಯಾವುದೇ ವೃಂದದ ಹುದ್ದೆಗಳನ್ನು ಭರ್ತಿ ಮಾಡಲು ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಅನುಪಾತ/ ಪ್ರತಿಶತ ಪ್ರಮಾಣವನ್ನು ನಿಗದಿಪಡಿಸಿದ್ದಲ್ಲಿ, ನಿಗದಿಪಡಿಸಿದ ಅನುಪಾತ/ ಪ್ರತಿಶತದನ್ವಯ ಹುದ್ದೆ ಆಧಾರಿತವಾಗಿ ನೇರ ನೇಮಕಾತಿಗೆ ಮತ್ತು ಮುಂಬಡ್ತಿಗಳಿಗೆ ಒಟ್ಟು ಹುದ್ದೆಗಳನ್ನು ವರ್ಗೀಕರಣ ಮಾಡತಕ್ಕದ್ದು. ಈ ಉದ್ದೇಶಕ್ಕಾಗಿ ಆ ವೃಂದದಲ್ಲಿನ ಶಾಶ್ವತ ಹುದ್ದೆಗಳ ಜೊತೆಗೆ ತಾತ್ಕಾಲಿಕ ಹುದ್ದೆಗಳು ಸಹ ಒಳಗೊಂಡಿರುತ್ತವೆ. ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಹುದ್ದೆಗಳನ್ನು ಮೇಲ್ಕಂಡಂತೆ ವರ್ಗೀಕರಿಸಿದ ನಂತರ ನೇರ ನೇಮಕಾತಿಗಾಗಿ ವರ್ಗೀಕರಿಸಿದ ಹುದ್ದೆಗಳನ್ನು ನೇರ ನೇಮಕಾತಿಯಿಂದಲೇ ಮತ್ತು ಮುಂಬಡ್ತಿಗಾಗಿ ವರ್ಗೀಕರಿಸಿದ ಹುದ್ದೆಗಳನ್ನು ಮುಂಬಡ್ತಿಯಿಂದಲೇ ಭರ್ತಿ ಮಾಡತಕ್ಕದ್ದು.

(2) ನೇರ ನೇಮಕಾತಿಯ ಮುಖಾಂತರ ನೇಮಕಾತಿ ಹೊಂದುವವರನ್ನು ನೇರ ನೇಮಕಾತಿಗೆ ನಿಗದಿಪಡಿಸಲಾದ ಅನುಪಾತ/ ಪ್ರತಿಶತದನ್ವಯ ನಿರ್ಧರಿಸಲಾದ ಹುದ್ದೆಗಳಿಗೆ ಹಾಗೂ ಮುಂಬಡ್ತಿಯ ಮುಖಾಂತರ ನೇಮಕಾತಿ ಹೊಂದುವವರನ್ನು ಮುಂಬಡ್ತಿಗೆ ನಿರ್ಧರಿಸಲಾದ ಹುದ್ದೆಗಳಿಗೆ ಮಾತ್ರ ಪರಿಗಣಿಸತಕ್ಕದ್ದು. ಅನುಪಾತ/ ಪ್ರತಿಶತ ಜಾರಿಯಲ್ಲಿರುವವರೆವಿಗೆ ನೇರ ನೇಮಕಾತಿಯ ಮುಖಾಂತರ ನೇಮಕಾತಿ ಹೊಂದುವವರನ್ನು ಮುಂಬಡ್ತಿ ಹುದ್ದೆಗಳಿಗೆ ಅಥವಾ ಮುಂಬಡ್ತಿಯ ಮುಖಾಂತರ ನೇಮಕಾತಿ ಹೊಂದುವವರನ್ನು ನೇರ ನೇಮಕಾತಿಗೆ ನಿರ್ಧರಿಸಲಾದ ಹುದ್ದೆಗಳಿಗೆ ನೇಮಕ ಮಾಡುವಂತಿಲ್ಲ.

(3) ಈ ಅಧಿಕೃತ ಜ್ಞಾಪನವು ಭವಿಷ್ಯವರ್ತಿಯಾಗಿ ಜಾರಿಗೆ ಬರುತ್ತದೆ. ಅದರ ಪೂರ್ವದಲ್ಲಿ ನೇರ ನೇಮಕಾತಿಗಾಗಿಯಾಗಲಿ ಅಥವಾ ಮುಂಬಡ್ತಿಗಾಗಿಯಾಗಲಿ ನಿರ್ಧರಿಸಲಾದ ಆ ರಿಕ್ತಸ್ಥಾನಗಳ ವರ್ಗೀಕರಣವು, ಅವುಗಳನ್ನು ಇದುವರೆವಿಗೆ ಭರ್ತಿ ಮಾಡದೇ ಇದ್ದಲ್ಲಿ, ತತ್‌ಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳ್ಳುತ್ತದೆ. ಇನ್ನು ಮುಂದೆ ಯಾವುದೇ ವೃಂದದ ಹುದ್ದೆಗಳನ್ನು ನಿಗದಿಪಡಿಸಿದ ಅನುಪಾತ/ ಪ್ರತಿಶತದನ್ವಯ ನೇರ ನೇಮಕಾತಿ ಮತ್ತು ಮುಂಬಡ್ತಿಗೆ ವರ್ಗೀಕರಣ ಮಾಡಿ ಭರ್ತಿ ಮಾಡುವಾಗ, ಹುದ್ದೆ ಆಧಾರಿತ ಪದ್ಧತಿಯ ಪ್ರಕಾರ ಮಾತ್ರ ವರ್ಗೀಕರಣ ಮಾಡಿ ಭರ್ತಿ ಮಾಡತಕ್ಕದ್ದು.

| | | | |
|---|---|---|---|
| 4 | ಹುದ್ದೆ ಆಧಾರಿತ ಪದ್ಧತಿಯ ಪ್ರಕಾರ ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಲಭ್ಯವಿರುವ ರಿಕ್ತಸ್ಥಾನಗಳು. | 124 (157-33 =124) | 65 (158 93=65) |

ಮೇಲ್ಕಂಡ ಉದಾಹರಣೆಯ ಕ್ರಮ ಸಂಖ್ಯೆ (4)ರಲ್ಲಿ ನಮೂದಿಸಲಾದ ರಿಕ್ತಸ್ಥಾನಗಳನ್ನು ಭವಿಷ್ಯದಲ್ಲಿ ಈ ಕೆಳಕಂಡಂತೆ ಭರ್ತಿಮಾಡತಕ್ಕದ್ದು:

(ಅ)ಸದರಿ ವೃಂದಲ್ಲಿನ ಹುದ್ದೆಯೊಂದಕ್ಕೆ ನೇರ ನೇಮಕಾತಿ ಮುಖಾಂತರ ನೇಮಕವಾದ ಸರ್ಕಾರಿ ನೌಕರನು ಉನ್ನತ ಹುದ್ದೆಗೆ ಮುಂಬಡ್ತಿ ಪಡೆದ ಕಾರಣ ಅಥವಾ ನಿವೃತ್ತಿ ಹೊಂದಿದ ಕಾರಣ ಅಥವಾ ಇತರೆ ಯಾವುದೇ ಕಾರಣಕ್ಕಾಗಿ ಆ ಹುದ್ದೆಯನ್ನು ತೆರವುಗೊಳಿಸಿದಲ್ಲಿ, ಅಂತಹ ಹುದ್ದೆಯನ್ನು ನೇರ ನೇಮಕಾತಿ ಮುಖಾಂತರವೇ ಭರ್ತಿ ಮಾಡತಕ್ಕದ್ದು.

(ಆ) ಅದೇ ರೀತಿ, ಸದರಿ ವೃಂದದಲ್ಲಿನ ಹುದ್ದೆಯೊಂದಕ್ಕೆ ಮುಂಬಡ್ತಿಯ ಮುಖಾಂತರ ನೇಮಕವಾದ ಸರ್ಕಾರಿ ನೌಕರನು ಉನ್ನತ ಹುದ್ದೆಗೆ ಮುಂಬಡ್ತಿ ಪಡೆದ ಕಾರಣ ಅಥವಾ ನಿವೃತ್ತಿ ಹೊಂದಿದ ಕಾರಣ ಅಥವಾ ಇತರೆ ಯಾವುದೇ ಕಾರಣಕ್ಕಾಗಿ ಆ ಹುದ್ದೆಯನ್ನು ತೆರವುಗೊಳಿಸಿದಲ್ಲಿ, ಅಂತಹ ಹುದ್ದೆಯನ್ನು ಮುಂಬಡ್ತಿಯ ಮುಖಾಂತರವೇ ಭರ್ತಿ ಮಾಡತಕ್ಕದ್ದು.

8. ಮುಂದುವರಿದು, ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳನ್ನು ರಿಕ್ತ ಸ್ಥಾನ ಆಧಾರಿತ ವರ್ಗೀಕರಣದ ಬದಲಾಗಿ ಹುದ್ದೆ ಆಧಾರಿತ ವರ್ಗೀಕರಣವನ್ನು ಅನುಸರಿಸಿ ಭರ್ತಿ ಮಾಡುವ ಬಗ್ಗೆ ಮಾರ್ಗಸೂಚನೆಗಳನ್ನು ಈ ಮೂಲಕ ನೀಡಲಾಗಿರುವ ಹಿನ್ನಲೆಯಲ್ಲಿ, ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು, 1957ರ ನಿಯಮ 10ರಡಿ ಜೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸುವುದಕ್ಕೆ ಸಂಬಂಧಿಸಿದಂತೆ ಹೊರಡಿಸಲಾದ ಉಲ್ಲೇಖ (3), (4) ಮತ್ತು (5) ರ ಅಧಿಕೃತ ಜ್ಞಾಪನಗಳನ್ನು ಪುನರಾವಲೋಕನೆ ಮಾಡಿ, ಪರಿಷ್ಕೃತ ನಮೂನೆಗಳನ್ನು ತಯಾರಿಸಿ **ಅನುಬಂಧ-1 ಮತ್ತು ಅನುಬಂಧ-2 ಗಳಲ್ಲಿ** ನೀಡಲಾಗಿದೆ. ಇನ್ನು ಮುಂದೆ, ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು, 1957ರ ನಿಯಮ 10ರ ಅಡಿ ಜೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸುವಾಗ **ಅನುಬಂಧಗಳಲ್ಲಿ** ನೀಡಲಾದ ಪರಿಷ್ಕೃತ ನಮೂನೆಗಳಲ್ಲಿ ಪ್ರತಿ ವರ್ಷವೂ ಡಿಸೆಂಬರ್ 31 ಕ್ಕೆ ಅಂತ್ಯಗೊಂಡಂತೆ ತಾತ್ಕಾಲಿಕ ಜೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸಿ, ಆಕ್ಷೇಪಣೆಗಳನ್ನು ಆಹ್ವಾನಿಸಿ, ಸ್ವೀಕೃತವಾದ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಸಾಧಾರಣವಾಗಿ, ಮಾರ್ಚ್ 31ರ ಒಳಗಾಗಿ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸತಕ್ಕದ್ದು.

9. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರು ಮೇಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದಲ್ಲದೆ, ಸದರಿ ಸೂಚನೆಗಳನ್ನು ಅವರ ಅಧೀನಕ್ಕೊಳಪಡುವ ಪ್ರಾಧಿಕಾರಿಗಳ ಗಮನಕ್ಕೆ ತಂದು ಕಟ್ಟುನಿಟ್ಟು ಪಾಲನೆಯನ್ನು ಖಚಿತಪಡಿಸಿಕೊಳ್ಳಬೇಕೆಂದು ತಿಳಿಸಲಾಗಿದೆ.

(ಪಿ. ಹೇಮಲತ)
ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಇದರ 100 ಪ್ರತಿಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸೇವಾ ನಿಯಮಗಳು-ಎ, ಕೊಠಡಿ ಸಂಖ್ಯೆ-31, ವಿಧಾನಸೌಧ, ನೆಲಮಹಡಿ ಇಲ್ಲಿಗೆ ಕಳುಹಿಸುವಂತೆ ಕೋರಲಾಗಿದೆ.

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್‌ಎಸ್‌ಎ), (ಇ &ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು,
4. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರು
5. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು
6. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಯವರು.
7. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು,
8. *ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ, ನವದೆಹಲಿ.
9. *ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ/ ಪರಿಷತ್ತು, ಬೆಂಗಳೂರು
10. *ಮಹಾನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
11. *ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
12. *ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
13. *ನಿಬಂಧಕರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ, 6 ಮತ್ತು 7ನೇ ಮಹಡಿ, ಕಂದಾಯಭವನ, ಕೆ.ಜಿ. ರಸ್ತೆ, ಬೆಂಗಳೂರು-560009.
14. *ನಿಬಂಧಕರು, ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ, ಬಹುಮಹಡಿ ಕಟ್ಟಡ, ಬೆಂಗಳೂರು.
15. ಎಲ್ಲಾ ಇಲಾಖಾ ಮುಖ್ಯಸ್ಥರು/ ಎಲ್ಲಾ ಪ್ರಾದೇಶಿಕ ಆಯುಕ್ತರು.
16. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. ಜಿಲ್ಲಾ ಪಂಚಾಯತ್/ ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.
17. ಸರ್ಕಾರದ ಜಂಟಿ ಕಾರ್ಯದರ್ಶಿ, (ಸಚಿವ ಸಂಪುಟ) (ವಿಷಯ ಸಂಖ್ಯೆ: ಸಿ:444/2021)
18. ಸರ್ಕಾರದ ಎಲ್ಲಾ ವಿಶೇಷ/ ಅಪರ/ ಜಂಟಿ/ ಉಪ/ ಅಧೀನ ಕಾರ್ಯದರ್ಶಿಗಳು
19. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು
20. ಶಾಖಾ ರಕ್ಷಾ ಕಡತ/ ಅಧಿಕ ಪ್ರತಿಗಳು
(*ಮುಖ ಪತ್ರದೊಂದಿಗೆ)

# ಅನುಬಂಧ-1

## ನೇರ ನೇಮಕಾತಿ ಮತ್ತು ಮುಂಬಡ್ತಿ ಎರಡೂ ವಿಧಾನಗಳಿಂದಲೂ ನೇಮಕಾತಿ ಮಾಡುವ ವೃಂದಗಳಿಗೆ

## ದಿನಾಂಕ: __________ರಲ್ಲಿ ಇದ್ದಂತೆ ತಾತ್ಕಾಲಿಕ/ ಅಂತಿಮ ಜೇಷ್ಠತಾ ಪಟ್ಟಿ

1. ಇಲಾಖೆ:
2. ವೃಂದದ ಹೆಸರು:
3. ವೃಂದದಲ್ಲಿನ ಒಟ್ಟು ಹುದ್ದೆಗಳ ಸಂಖ್ಯೆ (ಶಾಶ್ವತ ಮತ್ತು ತಾತ್ಕಾಲಿಕ ಹುದ್ದೆಗಳೆರಡೂ ಒಳಗೊಂಡಂತೆ ):
4. ನೇಮಕಾತಿ ನಿಯಮಗಳ ಅನುಸಾರ ನೇರ ನೇಮಕಾತಿ ಮತ್ತು ಮುಂಬಡ್ತಿಗೆ ನಿಗದಿಪಡಿಸಲಾದ ಅನುಪಾತ / ಪ್ರತಿಶತ:

### ಭಾಗ-I. ಹುದ್ದೆಗಳ ವಾಸ್ತವಿಕ ಮಾಹಿತಿ

| ಕ್ರ. ಸಂ. | ವೃಂದದ ಹೆಸರು | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿಗೆ ಮತ್ತು ಮುಂಬಡ್ತಿಗೆ ವರ್ಗೀಕರಿಸಲಾದ ಹುದ್ದೆಗಳ ಸಂಖ್ಯೆ | | ವಾಸ್ತವವಾಗಿ ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ | | ಹುದ್ದೆಗಳ ಅನುಪಾತ (Quota) ಮತ್ತು ಭರ್ತಿ ಮಾಡಲಾದ ಹುದ್ದೆಗಳ ನಡುವಿನ ಸಂಖ್ಯಾ ವ್ಯತ್ಯಾಸ | | | | ವಾಸ್ತವವಾಗಿ ಲಭ್ಯವಾಗುವ ಖಾಲಿ ಹುದ್ದೆಗಳ ಸಂಖ್ಯೆ | | ಷರಾ |
|---|---|---|---|---|---|---|---|---|---|---|---|---|
| | | | | | | ಹೆಚ್ಚುವರಿ | | ಕೊರತೆ | | | | |
| | | ನೇನೇ | ಮುಂ | ನೇನೇ | ಮುಂ | ನೇನೇ | ಮುಂ | ನೇನೇ | ಮುಂ | ನೇನೇ | ಮುಂ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| | | | | | | | | | | | | |

### ಭಾಗ-II.ತಾತ್ಕಾಲಿಕ/ ಅಂತಿಮ ಜೇಷ್ಠತಾ ಪಟ್ಟಿ

| ಕ್ರ. ಸಂ. | ಹೆಸರು | ನೇಮಕಾತಿಯ ವಿಧಾನ [ನೇರ ನೇಮಕಾತಿ/ ಮುಂಬಡ್ತಿ (ನೇ.ನೇ. / ಮುಂ)] | ಮೀಸಲಾತಿ ವರ್ಗ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ವಾಸ್ತವವಾಗಿ ಮುಂಬಡ್ತಿ ಹೊಂದಿದ ದಿನಾಂಕ | ಅರ್ಹತಾ ದಿನಾಂಕ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |

# ಅನುಬಂಧ-2

## ನೇರ ನೇಮಕಾತಿ ಅಥವಾ ಮುಂಬಡ್ತಿ, ಮುಖಾಂತರ ಒಂದೇ ವಿಧಾನದಿಂದ ನೇಮಕಾತಿ ಮಾಡುವ ವೃಂದಗಳಿಗೆ

## ದಿನಾಂಕ: __________ ರಲ್ಲಿ ಇದ್ದಂತೆ ತಾತ್ಕಾಲಿಕ/ ಅಂತಿಮ ಜೇಷ್ಠತಾ ಪಟ್ಟಿ

1. ಇಲಾಖೆ:
2. ವೃಂದದ ಹೆಸರು:
3. ವೃಂದದಲ್ಲಿನ ಒಟ್ಟು ಹುದ್ದೆಗಳ ಸಂಖ್ಯೆ (ಶಾಶ್ವತ ಮತ್ತು ತಾತ್ಕಾಲಿಕ ಹುದ್ದೆಗಳೆರಡೂ ಒಳಗೊಂಡಂತೆ ):
4. ನೇಮಕಾತಿ ನಿಯಮಗಳ ಅನುಸಾರ ನೇಮಕಾತಿ ವಿಧಾನ:

### ತಾತ್ಕಾಲಿಕ/ ಅಂತಿಮ ಜೇಷ್ಠತಾ ಪಟ್ಟಿ:

| ಕ್ರ. ಸಂ. | ಹೆಸರು | ಮೀಸಲಾತಿ ವರ್ಗ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಪ್ರಸ್ತುತವೃಂದಕ್ಕೆ ಮುಂಬಡ್ತಿ ಹೊಂದಿದ ದಿನಾಂಕ | ಅರ್ಹತಾ ದಿನಾಂಕ |
|---|---|---|---|---|---|---|
| 1 | 2 | 3 | 4 | 5 | 6 | 7 |
| | | | | | | |